ಶ್ರೀ ವಾಟಾಳ್ ನಾಗರಾಜ್ : – ಮಾನ್ಯ ಮುಖ್ಯಮಂತ್ರಿಗಳೇನು ಹೇಳಿದರು ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನಗೆ 4 ಬಾರಿ ಪ್ರಾಣ ಭಯ ಒಡ್ಡಿದ್ದಾರೆಂದು ಹೇಳಿದ್ದಾರೆ ಅಂದರೆ ಏನು ಅರ್ಥ. 1 2 3 ಬೇರೆ ಕಡೆ 4ನೇ ಬಾರಿ ಎಲ್ಲಿ ಅದು ಹೇಳಬೇಕು. ಈ ಸದನದಲ್ಲಿ ಹೇಳಿದರು 4ನೇ ಬಾರಿ ಅಂದರೆ ಎಲ್ಲಿ ಎನ್ನುವುದು ನನಗೆ ಅರ್ಥವಾಗಬೇಕು. 4ನೇ ಬಾರಿ ಎಲ್ಲಿ ಅವರಿಗೆ ಪ್ರಾಣ ಭಯ ಬಂತು ಅದನ್ನು ಹೇಳಬೇಕು. ಅದು ಕಡತದಲ್ಲಿ ಹೋಗಿದೆ. ಮಾನ್ಯ ಉಪ ಮುಖ್ಯ ಮಂತ್ರಿಗಳು ತಾವು ಚೆನ್ನಾಗಿ ವ್ಯಾಖ್ಯಾನ ಮಾಡುತ್ತೀರಿ ತಾವು ಹೇಳಿ. 4ನೆಯದು ಎಲ್ಲಿ ನಡೆಯಿತು ಅದನ್ನು ಹೇಳಲಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವವಿತ್ತು, ಈ ರೀತಿ ಸದನಕ್ಕೆ ಸುಳ್ಳು ಹೇಳುವುದು ನೋಡಿದರೆ ನನಗೆ ಅತ್ಯಂತ ಖೇದವೆನಿಸುತ್ತದೆ. ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇಂತಹ ಸರಕಾರವಿರುವ ಬದಲು, ಇವೆರಡೂ ಗುಂಪು ಕಿತ್ತಾಡಿ ರಾಜ್ಯದ ಆಡಳಿತವನ್ನು ಮೂಲೆ ಗುಂಪು ಮಾಡಿದ್ದೀರಿ, ಆಡಳಿತ ದಿವಾಳಿಯಾಗಿದೆ. ನಾವು ಬೇಕಾದರೆ ಈ ಸದನದಲ್ಲೆ ರಾಜ್ಯಪಾಲರನ್ನು, ರಾಷ್ಟ್ರಪತಿಯವರನ್ನು ಒತ್ತಾಯ ಮಾಡುತ್ತೇವೆ. ಈ ಸರಕಾರವನ್ನು ವಜಾ ಮಾಡಿ ಎಂದು ಹೇಳುತ್ತಿದ್ದೇವೆ. ಸಂಪೂರ್ಣ ರಾಷ್ಟ್ರಪತಿ ಆಳ್ವಿಕೆ ಬರಲಿ ಎಂದು ಒತ್ತಾಯ ಮಾಡಿ, ಆ ಒತ್ತಾಯಕ್ಕೆ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎ.ಕೆ.ಅನಂತ ಕೃಷ್ಣ : – ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಅಲ್ಲಿ ಏನು ನಡೆಯಿತು ಎಂದು.....

ಅಧ್ಯಕ್ಷರು : – ಆ ಚರ್ಚೆಗೆ ಅವಕಾಶ ಇಲ್ಲ. ತಾವು ಕುಳಿತುಕೊಳ್ಳಿ.

ಕಾವೇರಿ ನದಿ ನೀರಿನ ವಿವಾದ ಕುರಿತು ಚರ್ಚೆ

(ಮುಂದುವರಿದ ಚರ್ಚೆ).

ಶ್ರೀ ವೈ.ಕೆ.ರಾಮಯ್ಯ : – ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈ ಒಂದು ಪರಿಸ್ಥಿತಿಯಿರುವಾಗ ಈ ವಾತಾವರಣದಲ್ಲಿ ಈ ರಾಜ್ಯದ ಅಭಿವೃದ್ಧಿಯ ಅತ್ಯಂತ ಪ್ರಮುಖ ವಿಷಯದ ಬಗ್ಗೆ ಮಾತನಾಡುವಾಗ ಅದನ್ನು ಯಾರಾದರೂ ಕೇಳುವವರಿದ್ದಾರೆಯೇ? ಕೇಳಿ ಅನುಷ್ಠಾನಕ್ಕೆ ತರುವಂತಹ ಪರಿಸ್ಥಿತಿ ಇದೆಯೇ ಎಂದು ನನಗೆ ಅನುಮಾನ ಬಂದಿದೆ. ಅದು ಏನಾದರೂ ಆಗಿಕೊಂಡು ಹೋಗಲಿ. ನನ್ನ ಸ್ನೇಹಿತರು ಮಂತ್ರಿಮಂಡಲ ಇದೆಯೆಂದು ಭಾವಿಸಿಕೊಳ್ಳಿ ಎಂದು ಹೇಳಿದರು. ಮಂತ್ರಿಮಂಡಲವಿದೆ ಎಂದು ಭಾವಿಸಿಕೊಂಡು ಕಾವೇರಿ ನೀರಿನ ಹಂಚಿಕೆ ವಿಷಯದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಆದರೆ ಅನ್ಯಾಯವಾಗಲಿಕ್ಕೆ ನಮ್ಮಲ್ಲಿ ನ್ಯಾಯವಿದೆಯೇ? ತಮಿಳುನಾಡಿಗೂ ಕರ್ನಾಟಕಕ್ಕೂ ಇರುವಂತಹ ಈ ವಿವಾದದಲ್ಲಿ ಕರ್ನಾಟಕದವರದ್ದೇ ತಪ್ಪೇನೋ. ಪಾಪ ಕರ್ನಾಟಕದವರು ತಮಿಳುನಾಡಿನ ಬೆಳೆಗಾರರಿಗೆ ನೀರು ಬಿಟ್ಟು ಕೊಡುತ್ತಿಲ್ಲ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆನ್ನುವುದು ರಾಷ್ಟ್ರ ಮಟ್ಟದಲ್ಲಿ ಪ್ರಚಾರ ನಡೆಯುತ್ತಿದೆ. ನಾನು ವಿಧಿಯಿಲ್ಲದೆ ಹೇಳಬೇಕಾಗುತ್ತದೆ, ಇದು ಪ್ರಚಾರ ಅಲ್ಲ, ಅಪಪ್ರಚಾರ ಎಂದು. ಹೇಗೆ ಅಪಪ್ರಚಾರ ಎಂದರೆ, ಅದಕ್ಕೆ

4.05 ಪಿ.ಎಂ

ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಈ ವರ್ಷ ನಮಗೆ ನೀರನ್ನು ಬಿಟ್ಟು ಕೊಡಬೇಕೆಂದು ತಮಿಳ್ನಾಡಿನವರು ಒಂದು ಪ್ರಸ್ತಾವನೆಯನ್ನು ನಮ್ಮ ಕರ್ನಾಟಕ ಸರ್ಕಾರದ ಮುಂದೆ ತಂದರು. ಅವರ ಬೇಡಿಕೆ ಏನೆಂದರೆ, ನಮ್ಮ ಕುರುವೈ ಬೆಳೆಯೆಲ್ಲಾ ಒಣಗಿ ಹೋಗುತ್ತಿದೆ; ಆ ಬೆಳೆಗೆ ನೀರನ್ನು ಬಿಟ್ಟುಕೊಡಬೇಕೆಂಬ ವಾದವನ್ನು ಮುಂದಿಟ್ಟು ಅವರು ನಮ್ಮ ಕರ್ನಾಟಕ ರಾಜ್ಯಕ್ಕೆ ಒಂದು